ಬೆಂಗಳೂರಿನ ಜಯನಗರದ ‘ಜೈನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಾಮರ್ಸ್’ ನಲ್ಲಿ ದಿನಾಂಕ ೨೪-೦೬-೨೦೧೯ ಸೋಮವಾರದಂದು ಕಾಲೇಜಿನ ಕನ್ನಡ ವೇದಿಕೆಯ ಸಹಯೋಗದಲ್ಲಿ ಬೆಂಗಳೂರಿನ ಸಮುದಾಯ ಕರ್ನಾಟಕ, ಪರಿವರ್ತನ ಪೌಂಡೇಶನ್ ಕಲಾವಿದರ ಬಳಗವು "ನತದೃಷ್ಟ ಗೋಡೆ "ಎಂಬ ಬೀದಿ ನಾಟಕವನ್ನು ಹಮ್ಮಿಕೊಂಡಿತ್ತು. ‘ಜಲಿಯನ್ ವಾಲಾಬಾಗ್ ಹತ್ಯಾಕಾಂಡದ’ ವಿಷಯ ವಸ್ತುವನ್ನು ಆಧರಿಸಿ ಅಭಿನಯವನ್ನು ಪ್ರದರ್ಶಿಸಿದರು.ತಮ್ಮ ಪಕ್ವ ಅಭಿನಯದೊಂದಿಗೆ ನೋಡುಗರಾದ ಯುವ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಉಂಟಾದ ಬಲಿದಾನಗಳ ಕುರಿತು ಅರಿವು ಮೂಡಿಸಿದರು. ಇಂದಿನ ಯುವ ವಿದ್ಯಾರ್ಥಿಗಳು ವ್ಯಸನ ಮುಕ್ತರಾಗಿ ದೇಶದ ಬಗೆಗೆ ಅಭಿಮಾನ ಮತ್ತು ಪ್ರೀತಿಯನ್ನು ಮೈಗೂಡಿಸಿ ಕೊಳ್ಳಲು ಅನುವಾಗುವ ಸಂದೇಶವನ್ನು ಬಿತ್ತರಿಸಿದರು.ಈ ನಾಟಕ ಪ್ರದರ್ಶನದಲ್ಲಿ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು, ವಿವಿಧ ವಿಭಾಗದ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.









